ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE :

# 'ನಾನು ಹೆದರಲ್ಲ– ಹೈಕಮಾಂಡ್‌ಗೆ ದೂರು ನೀಡಿ'

ಸಂ.ಕ.ಸಮಾಚಾರ ದಾವಣಗೆರೆ

ಕೇಂದ್ರದ ನಾಯಕರ ಆಶೀರ್ವಾದ ನನ್ನ ಮೇಲೆ ಇರುವುದರಿಂದ ನಾನು ಯಾರಿಗೂ ಹೆದರಬೇಕಾಗಿಲ್ಲ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪರೋಕ್ಷವಾಗಿ ಯತ್ನಾಳ್ ವಿರುದ್ಧ ವಾಗ್ದಾಳಿ ನಡೆಸಿದರು.

ದಾವಣಗೆರೆಯ ಜಿಎಂಐಟಿ ಹೆಲಿಪ್ಯಾಡ್‌ನಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ನನ್ನ ಇತಿಮಿತಿಯೊಳಗೆ ಸಚಿವ ಸಂಪುಟ ವಿಸ್ತರಣೆ ಮಾಡಿದ್ದೇನೆ. ಕೇಂದ್ರ ನಾಯಕರ ಅಪೇಕ್ಷೆಯಂತೆ ಇನ್ನೊಂದು ಖಾಲಿ ಇಟ್ಟುಕೊಂಡಿದ್ದೇನೆ. ಸಚಿವ ಸ್ಥಾನ ವಂಚಿತರು ಇಲ್ಲಸಲ್ಲದ ಹೇಳಿಕೆ ನೀಡಿ ಗೊಂದಲ ಸೃಷ್ಟಿಸುತ್ತಿದ್ದಾರೆ. ಇದು ಯಾರಿಗೂ ಶೋಭೆ ತರುವುದಲ್ಲ.

- ಯತ್ನಾಳ್ ವಿರುದ್ಧ ಸಿಎಂ ವಾಗ್ದಾಳಿ
- ಸಚಿವ ಸ್ಥಾನ ವಂಚಿತರು ಗೊಂದಲ ಹೇಳಿಕೆ ನಿಲ್ಲಿಸಿ
- ರಾಜ್ಯದ ಅಭಿವೃದ್ಧಿಗೆ ಕೈಜೋಡಿಸಿ

ಯಾರೇ ಏನೇ ಇದ್ದರೂ ಕೇಂದ್ರದ ವರಿಷ್ಠರಿಗೆ ದೂರು ಕೊಡಿ. ಅದನ್ನು ನಾನು ಎದುರಿಸುವೆ ಎಂದರು.

ಹಣದಿಂದ ಹಸ್ನೈರಿದು ಬಂದಿರು ಮಂತ್ರಿ ಮಾಡಲಿಲ್ಲ ಎಂದು ಬೇಸರ ಮಾಡಿಕೊಂಡಿದ್ದಾರೆ. ಜೊತೆಗೆ ಮಂತ್ರಿ



ಸ್ಥಾನ ವಂಚಿತರು ಗೊಂದಲ ಹೇಳಿಕೆ ನೀಡುವುದನ್ನು ಬಿಟ್ಟು ನನ್ನ ಜೊತೆ ಚರ್ಚೆ ಮಾಡಿ ರಾಜ್ಯದ ಅಭಿವೃದ್ಧಿಗೆ ಸಹಕರಿಸುವಂತೆ ಕಿವಿಮಾತು ಹೇಳಿದರು.

ಕೇಂದ್ರ ನಾಯಕರ ಆಶೀರ್ವಾದದಿಂದ ಎರಡೂವರೆ ವರ್ಷ ಸರ್ಕಾರವನ್ನು ಯಶಸ್ವಿಯಾಗಿ ನಡೆಸಿದ್ದು, ಇನ್ನೂ ಉಳಿರುವ ಎರಡೂವರೆ ವರ್ಷ ಜನಪರ ಕೆಲಸ ಮಾಡಲು ಹೆಚ್ಚು ಗಮನ ಹರಿಸುತ್ತೇನೆ ಎಂದು ಇದೇ ಸಂದರ್ಭ ತಿಳಿಸಿದರು.

## ರೈತಪರ ಬಜೆಟ್

ಇದೇ ಜನವರಿ ತಿಂಗಳ ಅಂತ್ಯದಲ್ಲಿ ಚಳಿಗಾಲದ ಅಧಿವೇಶನ ನಡೆಯಲಿದೆ. ಬಳಿಕ ಮಾರ್ಚ್ ತಿಂಗಳಲ್ಲಿ ರಾಜ್ಯ ಬಜೆಟ್ ಅಧಿವೇಶನ ಮಾಡಲಿದ್ದು, ತಾವು ರೈತಪರ ಬಜೆಟ್ ಮಂಡಿಸಲು ಪ್ರಯತ್ನಿಸುತ್ತೇನೆ.

ಬಿ.ಎಸ್. ಯಡಿಯೂರಪ್ಪ

ಮುಖ್ಯಮಂತ್ರಿಗಳು